# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ60/2018

## ಚಾಸಾ-8/ಪ್ರಾಸಾ-11

**ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ22.04.2025.**

| | | |
|---|---|---|
| ಹೆಸರು | : | ತಿಪ್ಪೆಸ್ವಾಮಿ ತಂದೆ ಪಾಲಯ್ಯ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಕಾನನಕಟ್ಟೆ ಗ್ರಾಮ, ಜಗಳೂರು ತಾಲೂಕು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಈಗ ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯು ಆರೋಪಿ ತೋರಿಸಿದ ವಾಹನ ಜಪ್ತಿ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ17 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ17(ಬಿ) ಎಂದು ಗುರುತಿಸಲಾಯಿತು. ಈ ಸುಮಾರು 8 ವರ್ಷಗಳ ಹಿಂದೆ ಜಗಳೂರು ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ9 ರವರು ಸಹಿ ಮಾಡಿರುತ್ತಾರೆ. ಪೋಲಿಸರು ಟಾಟಾ ಏಸ್ ಗಾಡಿಯನ್ನು ಜಪ್ತು ಮಾಡಲು ಪಂಚನಾಮೆ ಜರುಗಿಸಿದಾಗ ಸಹಿ ಮಾಡಿರುತ್ತೇನೆ. ಯಾರು ವಾಹನ ಹಾಜರುಪಡಿಸಿದರು ನನಗೆ ನೆನಪು ಇರುವುದಿಲ್ಲ. ನನಗೆ ವಾಹನದ ಸಂಖ್ಯೆ ನೆನಪು ಇರುವುದಿಲ್ಲ.

**(** ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ**,** ಅನುಮತಿ ನೀಡಲಾಯಿತು**.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನಾನು ನಿಪಿ17 ರಲ್ಲಿ ದಿಃ03.08.2017 ರಂದು ಸಹಿ ಮಾಡಿರುತ್ತೇನೆ ಎಂದರೆ ಇರಬಹುದು. ಸದರಿ ಸಮಯಕ್ಕೆ ಚಾಸಾ18 ರವರು ಟಾಟಾ ಏಸ್ ವಾಹನ ಸಂಖ್ಯೆಃಕೆಎ-17/ಬಿ-5003 ನ್ನು

ಹಾಜರುಪಡಿಸಿರುತ್ತಾರೆ ಎಂದರೆ ನನಗೆ ನೆನಪು ಇರುವುದಿಲ್ಲ. ಅದೇ ದಿನ ಚಾಸಾ18 ರವರಿಗೆ ವಾಹನ ವಶಕ್ಕೆ ಕೊಟ್ಟಿರುತ್ತಾರೆ ಈ ಬಗ್ಗೆ ಪಂಚನಾಮೆ ಜರುಗಿಸಿ ಬೆಳಿಗ್ಗೆ 10.30 ರಿಂದ 11.15 ಗಂಟೆಯವರೆಗೆ ಪೋಲಿಸರು ಮಾಡಿರುತ್ತಾರೆ ಎಂದರೆ ನೆನಪು ಇರುವುದಿಲ್ಲ.

**<u>ಪಾಟೀ ಸವಾಲುಃ-ಆರೋಪಿ ಪರ Sri.H.H., ವಕೀಲರಿಂದಃ</u>**

ಪೋಲಿಸರು ನನ್ನಿಂದ ಖಾಲಿ ಹಾಳೆಗೆ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ17 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಜೊತೆ ನಿಪಿ17 ಕ್ಕೆ ಚಾಸಾ9 ರವರು ಸಹಿ ಮಾಡಿರುತ್ತಾರೆ. ನಾನು ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನಿಪಿ17 ಜರುಗಿಸುವ ಕಾಲಕ್ಕೆ ಯಾವುದೇ ವಾಹನ ತೋರಿಸಿರುವುದಿಲ್ಲ ಎಂದರೆ ಸರಿ. ನಾನು ಸಹಿ ಮಾಡುವ ಕಾಲಕ್ಕೆ ಜಗಳೂರಿನಲ್ಲಿ 02 ಪೋಲೀಸ್ ಠಾಣೆಗಳು ಇದ್ದವು ಎಂದರೆ ಸರಿ. ನನಗೆ ಯಾವ ಠಾಣೆಯ ಮುಂದೆ ಸಹಿ ಮಾಡಿದೆನು ಎಂದು ನೆನಪು ಇರುವುದಿಲ್ಲ ಎಂದರೆ ಸರಿ. ನಿಪಿ17 ನ್ನು ಯಾರು ಬರೆದರು ಎಂದು ನನಗೆ ನೆನಪು ಇರುವುದಿಲ್ಲ ಎಂದರೆ ಸರಿ. ನನಗೆ ಚಾಸಾ18 ರವರು ಠಾಣೆಯಲ್ಲಿ ಇದ್ದ ಬಗ್ಗೆ ನೆನಪು ಇರುವುದಿಲ್ಲ. ಪೋಲಿಸರು ನನಗೆ ಚಾಸಾ18 ರವರನ್ನು ತೋರಿಸಿರುವುದಿಲ್ಲ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)**

**ಓ ಹೇ ಕೇ ಸರಿ ಇದೆ**

**ಸಹಿ**

**ಪ್ರ.ದ.ನ್ಯಾ.ದಂ., ಜಗಳೂರು**